<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.196/2014

ಚಾಸಾ-8 ಪ್ರಾಸಾ-9

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 17.12.2019

| | | |
|---|---|---|
| ಹೆಸರು | ಃ | ಪರಶುರಾಮ ಪೂಜಾರಿ |
| ತಂದೆ ಹೆಸರು | ಃ | ಮಡ್ಡಪ್ಪ |
| ವಯಸ್ಸು | ಃ | 35-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಚಾಂದಕೋಟೆ, ತಾ. ಸಿಂದಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತನ ಹಾಗೂ ಚಾಸಾ-1 ರವರ ಪರಿಚಯವಿಲ್ಲ. ಘಟನೆ ಕುರಿತು ನನಗೆ ಏನು ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 18.12.2010 ರಂದು ರೇಣುಕಾ ಪ್ಯಾಕ್ಟರಿಯಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದೆ. ಅದೇ ದಿನ ಸಾಯಂಕಾಲ 4.30 ಗಂಟೆಗೆ ಲಾರಿ ನಂ.ಕೆಎ-25/ಬಿ-2247 ರಲ್ಲಿ 50 ಕೆಜಿ ತೂಕದ 460 ಸಕ್ಕರೆ ಚೀಲಗಳನ್ನು

ಹೇರಿ ಕಳಿಸಿದ್ದೆನು ಎಂದರೆ ಸರಿಯಲ್ಲ. ಆ ದಿನ ಆರೋಪಿತನು ಸದರಿ ಲಾರಿಯನ್ನು ತಂದಿದ್ದನು ಎಂದು ನೋಡಿಲ್ಲ. ಆರೋಪಿತನು ಸದರಿ ಸಕ್ಕರೆ ಚೀಲಗಳನ್ನು ಬೇರೆ ಕಡೆ ಮಾರಿಕೊಂಡಿದ್ದನೆಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ನಂತರ ಪೋಲಿಸರು ಬಂದು ಆರೋಪಿತರು ಪೋಟೊ ತೋರಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಆರೋಪಿತರು ಲಾರಿಯ ನಂಬರ ಪ್ಲೇಟ ಬದಲಾಯಿಸಿಕೊಂಡು ಸಕ್ಕರೆ ಚೀಲಗಳನ್ನು ಮಾರಿಕೊಂರುವ ಬಗ್ಗೆ ವಿಷಯ ತಿಳಿಯಿತು ಎಂದರೆ ಗೊತ್ತಿಲ್ಲ. ಈ ಕುರಿತು ಚಾಸಾ-1 ರವರು ಪ್ರಕರಣ ದಾಖಲಿಸಿದ ಬಗ್ಗೆ ಗೊತ್ತಿಲ್ಲ. ಘಟನೆ ಕುರಿತು ಈಗ ಓದಿ ಹೇಳಲಾದ ನಿಪಿ-20 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದರೂ ಸಹ ಅರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ